ರೈತನ ಖಾತೆಗೆ ಜಮಾ ಮಾಡಬೇಕಾಗಿರುವುದು ಅತ್ಯಾವಶ್ಯಕವಾಗಿದೆ. ಅದನ್ನು ಮಾಡಬೇಕೆಂದು ಹೇಳುತ್ತೇನೆ. ಈಗಿರತಕ್ಕಂಥ 130 ಕೋಟಿ ಸಾಲ ವಜಾ ಆಗಿದೆ ಎಂದು ತಾವು ಏನು ಹೇಳುತ್ತಿದ್ದೀರಿ, ಅದರ ಬಗ್ಗೆ ಕೆಲವು ತಾಲ್ಲೂಕುಗಳಿಂದ ದಯವಿಟ್ಟು ಮಾಹಿತಿಯನ್ನು ತರಿಸಿ ನೋಡಿ. ಇದು ಯೂನಿಫಾರಂ ಆಗಿ ಆಗಿಲ್ಲ. ಕೆಲವುಕಡೆ ಆಣೇವಾರಿ ಪದ್ಧತಿಯನ್ನು ಅನುಸರಿಸುವ ಕಾರಣದಿಂದ ನಿಜವಾಗಲೂ ಪೆತೊಂದರೆಯಾಗಿರುವ ರೈತನಿಗೆ, ತೀರಾ ಅನಾಹುತಕ್ಕೆ ಒಳಗಾಗಿರುವ ಕೆಲವು ತಾಲ್ಲೂಕುಗಳು, ಕೆಲವು ಹಳ್ಳಿಗಳು ಏನಿವೆ ಅಂತಹ ಹಳ್ಳಿಗಳಲ್ಲಿ ಕೂಡಾ ಆಣೇವಾರಿ ಪದ್ಧತಿಯನ್ನು ಅನುಸರಿಸುವ ಕಾರಣದಿಂದ ಪೂರ್ತಿಯಾಗಿ ಈ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ವಾಸ್ತವಾಂಶ ಇದು. ಪಹಣಿ ಬರೆಯತಕ್ಕದ್ದು ಯಾವರೀತಿ ಎಂದು ತಮಗೇ ಗೊತಿ ವುದೆ. ತಾವೂ ರೆವಿನ್ಯೂ ಮಿನಿಸ್ಟರ್ ಆಗಿದ್ದವರು. ವಿಲೇಜ್ ಅಕೌಂಟೆಂಟ್ಸ್ ಸ್ಥಳದಲ್ಲೇ ಇರಬೇಕು,ಇಲ್ಲದೆ ಹೋದರೆ ಸಸ್ಪೆಂಡ್ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ಈ ರೀತಿ ನಾವು ಹೇಳುತ್ತಾ ಇರುತ್ತೇವೆ ಮುಂದೆ ಹೋಗುತ್ತೇವೆ. ಆದರೆ ಅದು ಜಾರಿಯಾಗಿಲ್ಲ. ಅವರು ಪಹಣಿ ಯಾವ ರೀತಿ ಬರೆಯುತ್ತಾರೆ ಅದನ್ನು ನಾವು ನೆರಳು ಪಹಣಿ ಎನ್ನುತ್ತೇವೆ. ಏತಕ್ಕೆಂದರೆ ಭೂಮಿ ತುಳಿದು, ಭೂಮಿ ಹತ್ತಿರ ಹೋಗಿ, ಏನು ಬೆಳೆ ಇದೆ ಅದನ್ನು ಕಂಡು ಪಹಣಿ ಬರೆದಿಲ್ಲ. ವಾಸ್ತವಾಂಶಕ್ಕೂ ಪಹಣಿಯಲ್ಲಿರುವುದಕ್ಕೂ ಬಹಳ ವ್ಯತ್ಯಾಸ ಇದೆ. ಆಣೇವಾರಿ ಪದ್ಧತಿ ಕೆ ಬಿಟ್ಟು ವಾಸ್ತವಾಂಶ ಅನುಸರಿಸಿ, ಪಾಲಿ ಜಾರಿಯಲ್ಲಿರತಕ್ಕಂಥ ಯೋಜನೆಯಲ್ಲಿ ರೈತರಿಗೆ ಸಂಪೂರ್ಣವಾಗಿ ಸೌಲಭ್ಯವನ್ನು ಕೊಡುವುದಕ್ಕೆ ತಾವು ದಯವಿಟ್ಟು ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಚಿವರು ಸುತ್ತಿ ಬಳಸಿ ಅದೇ ಉತರ ಕೊಡುತ್ತಿದ್ದಾರೆ. ಇದರಿಂದ ರೈತರ ಉದ್ಧಾರವಾಗುವುದಿಲ್ಲ. ಈ ಸರ್ಕಾರ ರೈತರ ಪರ ಇಲ್ಲ. ಈ ರೀತಿಯ ಉತ್ತರಗಳಿಂದ ರೈತರ ಸಮಸ್ಯೆ ಪರಿಹಾರವಾಗುವುದಿಲ್ಲ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರ ರೈತರ ವಿರುದ್ಧವಾಗಿದೆ. ಸರ್ಕಾರದ ಈ ರೈತ ವಿರೋಧಿ ನೀತಿಯನ್ನು ನಾವು ತೀವ್ರತರವಾಗಿ ಪ್ರತಿಭಟನೆ ಮಾಡುತ್ತೇವೆ. ಶಿವು ಎಷ್ಟೇ ಒತ್ತಾಯ ಮಾಡಿದರೂ ಸಹ ಈ ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲ. ಈ ಸದನ ಮುಗಿದ ಮೇಲೆ ರೈತರು ನಿಮಗೆ ತಕ್ಕ ಪಾಠ ಕಲಿಸುತ್ತಾರೆ. ನಾವು ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಕುಳಿತುಕೊಳ್ಳುತ್ತೇವೆ. ಸರ್ಕಾರದ ಉತ್ತರವನ್ನು ವಿರೋಧಿಸಿ ನಾವು ಈ ಸದನದಿಂದ ಹೊರಗಡೆ ಹೋಗುತ್ತೇವೆ.

(ಗೊಂದಲ)

(ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಬೈರೇಗೌಡರು ಮೊದಲನೆಯದಾಗಿ ಹೇಳಿದ್ದು ಏನು ಇದೆ, ಅದು ಲೆಕ್ಕದಲ್ಲಿ ಏನಾದರೂ ವ್ಯತ್ಯಾಸ ಆಗಿದ್ದರೆ ಅದನ್ನು ನನ್ನ ಗಮನಕ್ಕೆ ತನ್ನಿ, ನಿಜವಾಗಿಯೂ ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ, ನಾನು ಈಗಾಗಲೇ ತಿಳಿಸಿದ್ದೇನೆ. ಈ ರಿಸ್ಟ್ರಿಕ್ಷನ್ ಏನು ಇದೆ ಅದರಲ್ಲಿ ಇದೂ ಇದೆ. ಆಣೇವಾರು ಸರಿಯಲ್ಲವೆಂದು ನಾವು ಒಪ್ಪಿ ಅದನ್ನು ಸರಿ ಮಾಡಬೇಕೆಂದು ಪತ್ರ ಬರೆದಿದ್ದೇವೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಉಪಾಧ್ಯಕ್ಷಣಿಯವರೆ, ನನಗೆ ಆಶ್ಚರ್ಯವಾಗುತ್ತಿದೆ. ನಮ್ಮ ಬಿ. ಜೆ. ಪಿ. ಸದಸ್ಯರು ಸದನದಲ್ಲಿ ಧರಣಿ ಕುಳಿತುಕೊಂಡರು ನಾವು ಬಿ. ಎ. ಸಿ. ರೂಲ್ಸ್ ಪ್ರಕಾರ ಇದನ್ನು ಮಾಡಬೇಕಾಗುತ್ತದೆ. ಇವರ ದ್ವಂದ್ವ ನೀತಿಗಳು ನನಗೆ ಅರ್ಥವಾಗುತ್ತಿಲ್ಲ. ಇವರು ರೈತರ ಪರವಾಗಿ ಮಾತನಾಡುತ್ತೇವೆಂದು ಹೇಳಿ ಅವತ್ತು ಧರಣಿ ಕುಳಿತುಕೊಂಡರು. ಧರಣಿ ಕುಳಿತುಕೊಂಡಮೇಲೆ ನಾವು ಹೋಗಿ ಅವರನ್ನು ಕೇಳಿಕೊಂಡಾಗ, ನಮಗೆ ಸರ್ಕಾರದಿಂದ ಅವರು ಏನು ಮಾಡುತ್ತಾರೆಂದು ಒಂದು ಆಶ್ವಾಸನೆ ಕೊಡಲಿ, ಪ್ರಧಾನ ಮಂತ್ರಿಗಳ ಮನ ಒಲಿಸಲು ಪ್ರಯತ್ನ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನಾವು ಧರಣಿ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಈಗ ವಾಕ್ ಔಟ್ ಮಾಡುತ್ತಿದ್ದಾರೆ. ಬಿ.ಜೆ.ಪಿ. ಯವರ ದ್ವಂದ್ವ ನೀತಿ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ :– ಅವರಿಗೆ ನಿಜವಾಗಿ ರೈತರ ಬಗ್ಗೆ ಕಳಕಳಿ ಇಲ್ಲ. ಅವರಿಗೆ ನಾವು ಹೇಗೆ ಜನರನ್ನು ಅಟ್ರಾಕ್ಟ್ ಮಾಡಬೇಕೆನ್ನುವ ಕಳಕಳಿ ಇದೆ. ಅವರು ಇಷ್ಟು ದಿವಸ ರಾಮನ ಹೆಸರು ಹೇಳಿದರೆ ಅಟ್ರಾಕ್ಟ್ ಆಗುತ್ತದೆಂದು ನೋಡಿದರು, ಅದು ಆಗಲಿಲ್ಲ. ಆದಕ್ಕೆ ಈಗ ರೆತರ ಹೆಸರನ್ನು ಹೇಳುವುದಕ್ಕೆ ಹೊರಟಿದ್ದಾರೆ ಅಷ್ಟೇ.

ಶ್ರೀ ಸಿ. ಬೈರೇಗೌಡ :– ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಬಡ್ಡಿ ಬಾಬತ್ತು ಪುನಃ ರೈತರಿಂದ ವಸೂಲಿ ಮಾಡತಕ್ಕಂಥಾದ್ದು